ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ-584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ

ಆಡಳಿತ ವಿಭಾಗ

ಸಂ.ರಾವಿರಾ/ಆಡಳಿತ/ಸಿಂಡಿಕೇಟ್ ಸಾಮಾನ್ಯ ಸಭೆ/2023-24/ ದಿನಾಂಕ: 09.11.2023

## ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ **09.11.2023** ರಂದು ಗುರುವಾರ ಬೆಳಿಗ್ಗೆ 11.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳು.

## ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

| | | |
|---|---|---|
| 1. | ಪ್ರೊ. ಹರೀಶ್ ರಾಮಸ್ವಾಮಿ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ. ಶಿವಬಸಪ್ಪ, ಮಾಲಿಪಾಟೀಲ | ಸಿಂಡಿಕೇಟ್ ಸದಸ್ಯರು |
| 3. | ಶ್ರೀ.ನಾಗೇಂದ್ರ ಪ್ರಸಾದ ಎ.ಎಂ | ಸಿಂಡಿಕೇಟ್ ಸದಸ್ಯರು (ಆನಲೈನ್ ಮುಖಾಂತರ) |
| 4. | ಡಾ. ಅರುಣಾ ಕುಮಾರಿ ಬಿ., | ಸಿಂಡಿಕೇಟ್ ಸದಸ್ಯರು |
| 5. | ಡಾ.ಯಂಕಣ್ಣ | ಸಿಂಡಿಕೇಟ್ ಸದಸ್ಯರು |
| 6. | ಡಾ.ಕೆ ಸುಭಾಷ್‌ಚಂದ್ರ, | ಸಿಂಡಿಕೇಟ್ ಸದಸ್ಯರು (ಆನಲೈನ್ ಮುಖಾಂತರ) |
| 7. | ಪ್ರೊ. ಪಾರ್ವತಿ ಸಿ.ಎಸ್., | ಸಿಂಡಿಕೇಟ್ ಸದಸ್ಯರು |
| 8. | ಪ್ರೊ. ಎಂ. ಯರಿಸ್ವಾಮಿ, ಕುಲಸಚಿವರು(ಮೌಲ್ಯಮಾಪನ) | ಸಿಂಡಿಕೇಟ್ ಸದಸ್ಯರು |
| 9. | ಪ್ರೊ. ವಿಶ್ವನಾಥ ಎಂ. ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ಸಿಂಡಿಕೇಟ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಕಲಂ/ಐಟಂ ನಂ. | ವಿಷಯ | ಸಿಂಡಿಕೇಟ್ ನಿರ್ಣಯ |
|---|---|---|
| 1. | ದಿನಾಂಕ 18.08.2023 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು. | ದಿನಾಂಕ 18.08.2023 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |
| 2. | ದಿನಾಂಕ 26 ಮತ್ತು 27 ಸಪ್ಟೆಂಬರ್,2023 ರಂದು ರಾಯಚೂರು ವಿಶ್ವವಿದ್ಯಾಲಯ ಹಾಗೂ ಚಾಣಕ್ಯ ವಿಶ್ವವಿದ್ಯಾಲಯ, ಬೆಂಗಳೂರು ಇವರ ಸಹಯೋಗದಲ್ಲಿ ಆಯೋಜಿಸಿದ "ಭಾರತದಲ್ಲಿ ಭಕ್ತಿ ಸಂಪ್ರದಾಯಗಳು" ಕುರಿತು ಎರಡು ದಿನಗಳ ಕಾರ್ಯಾಗಾರಕ್ಕೆ ಮಾಡಿದ ಖರ್ಚು ವೆಚ್ಚಗಳನ್ನು ಅನುಸಮರ್ಥಿಸುವ (Ratification) ಕುರಿತು. | ರಾಯಚೂರು ವಿಶ್ವವಿದ್ಯಾಲಯದಲ್ಲಿ ಸಿಂಡಿಕೇಟ್ ಸಭೆಯು ಹರ್ಷ ವ್ಯಕ್ತ ಪಡಿಸುತ್ತ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಭಕ್ತಿ ಪರಂಪರೆ, ದಾಸ ಪರಂಪರೆಯ ಇತಿಹಾಸ ಅತ್ಯಂತ ಶ್ರೇಷ್ಟತೆಯಿಂದ ಕೂಡಿದ್ದು, ಈ ವಿಚಾರಗಳ ಬಗ್ಗೆ ವಿಶ್ವವಿದ್ಯಾಲಯು ಆಯೋಜಿಸಿರುವ ಇಂತಹ ಕಾರ್ಯಕ್ರಮಗಳಿಗೆ ಬೆಂಬಲ ವ್ಯಕ್ತಪಡಿಸಿ ಸೆಪ್ಟಂಬರ್ 26 ಮತ್ತು 27 ಜರುಗಿದ ಕಾರ್ಯಕ್ರಮಕ್ಕೆ ಕುಲಪತಿಗಳು |

| | | |
|---|---|---|
| | | ನೀಡಿದ ಅನುಮೋದನೆ ಮತ್ತು ತಗಲಿದ ವೆಚ್ಚವಾದ 2,54,521=00 ಲಕ್ಷ ರೂಗಳನ್ನು ಒಪ್ಪಿಗೆ ನೀಡಿ, ಅನುಸಮರ್ಥಿಸಲಾಯಿತು. |
| 3. | ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಪ್ರೊಫೆಸರ್ ಆಫ್ ಪ್ರ್ಯಾಕ್ಟೀಸ್ (Professor of Practice) ರನ್ನು ನೇಮಕಾತಿ ಮಾಡುವ ಕುರಿತು ಚರ್ಚೆ. | NEP-20-20 ರ ಜಾರಿಗೊಳಿಸಿದ ನಂತರ ವಿವಿಧ ಆಯಾಮಗಳಲ್ಲಿ ಹಾಗೂ ನೂತನ ವಿಧಾನಗಳಿಂದ ಶೈಕ್ಷಣಿಕ ಗುಣಮಟ್ಟ ಕಾರ್ಯ ನಡೆಯುತ್ತಿದ್ದು, ಈ ದೆಸೆಯಲ್ಲಿ UGC ಯು Professor Of Practice ಎಂಬ ಪದನಾಮದೊಂದಿಗೆ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ Practicle ಅನುಭವಗಳನ್ನು ನೀಡಲು Professor Of Practice ಅಂದರೆ ತಮ್ಮ ತಮ್ಮ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಶ್ರೇಷ್ಠ ಸಾಧನೆ ಮಾಡಿರುವಂತಹ ವ್ಯಕ್ತಿಗಳನ್ನು ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿ, Professor Of Practice ಅಡಿಯಲ್ಲಿ ಅವರನ್ನು UGC ನಿಯಮಾನುಸಾರ Time Bond Period ಪ್ರಕಾರ ನೇಮಿಸಿಕೊಳ್ಳಲು ನಿಯಮವು ರೂಪಿಸಿರುತ್ತದೆ. ರಾಯಚೂರು ವಿಶ್ವವಿದ್ಯಾಲಯವು ಇದರ ಪ್ರಕಾರ Professor Of Practice ರ ಅಡಿಯಲ್ಲಿ ವಿವಿಧ ವಿಭಾಗಗಳಿಗೆ ನೇಮಿಸಿಕೋಳ್ಳಬಹುದೆಂದು ಮಾನ್ಯ ಕುಲಪತಿಗಳ ಈ ವಿಚಾರವನ್ನು ಒಪ್ಪಿ ವಿಶ್ವವಿದ್ಯಾಲಯ Professor Of Practice ಎಂಬ ಪರಿನಿಯಮಾವಳಿಯನ್ನು ರಚಿಸಿ ಅದನ್ನು ಸರ್ಕಾರದ ಅನುಮತಿಗಾಗಿ ಕಳುಹಿಸಬೇಕೆಂದು ತೀರ್ಮಾನಿಸಲಾಯಿತು. |
| 4. | 2023-24 ನೇ ಸಾಲಿನ ರಾಯಚೂರು ವಿಶ್ವವಿದ್ಯಾಲಯದ ಸ್ನಾತಕತೋತ್ತರ ಪದವಿಗಳ ಪ್ರವೇಶಾತಿಗಾಗಿ ಹೊರಡಿಸಿರುವ ಅಧಿಸೂಚನೆಯನ್ನು ಅನುಸಮರ್ಥಿಸುವ (Ratification) ಕುರಿತು. | ಸಿಂಡಿಕೇಟ್ ಸಭೆಯಲ್ಲಿ ಅನುಸಮರ್ಥಿಸಲಾಯಿತು. |
| 5. | ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರಡಿ ನಿಯಂತ್ರಿಸಲ್ಪಡುವ ಸಂಯೋಜನೆಗೊಳಿಸುವ ಹಾಗೂ ಏಕಾತ್ಮಕ ವಿಶ್ವವಿದ್ಯಾಲಯಗಳು ಸಹ ಸೇರಿ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸಾಮಾನ್ಯವಾಗಿ ಅನ್ವಯಿಸುವಂತೆ ವಿವಿಧ ಕೋರ್ಸುಗಳಿಗೆ ಏಕರೂಪದ ವಿದ್ಯಾರ್ಥಿ ಶುಲ್ಕಗಳನ್ನು | ಕರ್ನಾಟಕ ರಾಜ್ಯ ಸರ್ಕಾರವು ಇಡಿ/385/ URC/2020-22 ದಿನಾಂಕ: 16/10/2023 ಪತ್ರದ ಮುಖಾಂತರ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸಾಮಾನ್ಯವಾಗಿ ಅನ್ವಯಿಸುವಂತೆ ವಿವಿಧ ಕೋರ್ಸಗಳಿಗೆ ಏಕರೂಪದ ಶುಲ್ಕ ನಿಗದಿಪಡಿಸಿ, ಸರ್ಕಾರ ನೇಮಿಸಿದ ಸಮಿತಿಯ ಶಿಫಾರಸ್ಸನ್ನು ಒಪ್ಪಿ ಅದನ್ನು ಅನುಷ್ಠಾನ ಗೊಳಿಸಲು ನಿರ್ದೇಶಿಸಿದೆ. ಸಿಂಡಿಕೇಟ್ ಸಭೆಯ ಈ ನಿರ್ದೇಶನವನ್ನು ವಿಶ್ವವಿದ್ಯಾಲಯವು ಅಧಿಸೂಚನೆ |

| | | |
|---|---|---|
| | ಏಕರೂಪದ ವಿದ್ಯಾರ್ಥಿ ಶುಲ್ಕಗಳನ್ನು ನಿಗದಿಪಡಿಸಲು, ಏಕರೂಪದ ಪರೀಕ್ಷಾ ಸಂಭಾವನೆಯನ್ನು ಗೊತ್ತುಪಡಿಸಲು ಹಾಗೂ ಪರೀಕ್ಷಾ ವ್ಯವಸ್ಥೆಯನ್ನು ಸುವ್ಯವಸ್ಥಿತಗೊಳಿಸುವ ಕುರಿತು | ನಿರ್ದೇಶನವನ್ನು ವಿಶ್ವವಿದ್ಯಾಲಯವು ಅಧಿಸೂಚನೆ ಹೊರಡಿಸಿ 2023-24 ನೇ ಶೈಕ್ಷಣಿಕ ವರ್ಷದಿಂದ ಸ್ನಾತಕೋತ್ತರ ಪದವಿಗಳಿಗೆ ಅನ್ವಯಗೊಳಿಸಿ ಹಾಗೂ ಪರೀಕ್ಷಾ ಕಾರ್ಯಕ್ಕೆ ವರದಿಯಲ್ಲಿ ನಿಗದಿಪಡಿಸಿರುವ ಪರೀಕ್ಷಾ ಕೆಲಸಗಳನ್ನು ನಿರ್ವಹಿಸುವ ಅಧ್ಯಾಪಕರು ಮತ್ತು ಇತರೇ ಸಿಬ್ಬಂದಿಗಳಿಗೆ ಪಾವತಿಸುವ ಸಂಭಾವನೆಯನ್ನು ಅಂಗೀಕರಿಸಿ ಮುಂದುವರೆದು, ಈ ಏಕರೂಪದ ಶುಲ್ಕದ ವರದಿಗೆ ಪರಿನಿಯಮಾವಳಿಗಳನ್ನು ರೂಪಿಸಿ, ಹಣಕಾಸು ಸಮಿತಿ, ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು. |
| 6. | 2023-24 ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾಲಯದ 20 ವಿಭಾಗಗಳಿಗೆ ಅತಿಥಿ ಉಪನ್ಯಾಸಕರುಗಳನ್ನು ತಾತ್ಕಾಲಿವಾಗಿ ನೇಮಕಾತಿ ಮಾಡುವ ಕುರಿತು | ರಾಯಚೂರು ವಿಶ್ವವಿದ್ಯಾಲಯ 2023-24 ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾಲಯದ ಕಾರ್ಯಭಾರದಂತೆ ತನ್ನ 20 ವಿಭಾಗಗಳಿಗೆ ಅತಿ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಲು ಸಿಂಡಿಕೇಟ್ ಸಭೆಗೆ ಕುಲಸಚಿವರು ಮಂಡಿಸಿದರು, ಸಿಂಡಿಕೇಟ್ ಸಭೆಯು ಅಧಿಸೂಚನೆ ಹೊರಡಿಸಲು ಒಪ್ಪಿಗೆ ನೀಡಿ ವಿಶ್ವವಿದ್ಯಾಲಯ ಕರ್ನಾಟಕ ಸರ್ಕಾರ ಹಾಗೂ UGC ನಿಯಮಾನುಸಾರ ಅಥಿತಿ ಉಪನ್ಯಾಸಕರ ನೇಮಕಾತಿಯನ್ನು ಸಂದರ್ಶನ ಮುಖಾಂತರ ನಡೆಸಿ ನೇಮಕ ಮಾಡಿಕೊಳ್ಳಲು ಒಪ್ಪಿಗೆ ಸೂಚಿಸಲಾಯಿತು. |
| 7. | ಕರ್ನಾಟಕ ರಾಜ್ಯ ಕ್ರಿಕೇಟ್ ಅಸೋಸಿಯೇಶನ್ನ (KSCA) ಹಾಗೂ ರಾಯಚೂರು ವಿಶ್ವವಿದ್ಯಾಲಯದ ನಡುವೆ ವಿಶ್ವವಿದ್ಯಾಲಯದ ಆವರಣದಲ್ಲಿ ಕ್ರೀಕೆಟ್ ಕ್ರೀಡಾಂಗಣವನ್ನು ನಿರ್ಮಾಣ ಮಾಡಲು ಭೂಮಿಯನ್ನು (Land) ನೀಡುವ ಕುರಿತು ಒಪ್ಪಂದ (MOU). | ರಾಯಚೂರು ವಿಶ್ವವಿದ್ಯಾಲಯು 250 ಎಕರೆ ಭೂಮಿ ಹೊಂದಿದ್ದು, ಇದರ ಅಭಿವೃಧಿಗಾಗಿ ಹಲವು ಯೋಜನೆಗಳನ್ನು ರೂಪಿಸಿದ್ದು ಅದರಲ್ಲಿ ಕ್ರೀಡಾಂಗಣ ಒಂದು ಪ್ರಮುಖ ವಿಶ್ವವಿದ್ಯಾಲಯದ ಯೋಜನೆಯಾಗಿದೆ. KSCA ರಾಯಚೂರಿನಲ್ಲಿ ಒಂದು ಉತ್ಕೃಷ್ಟ ಕ್ರೀಡಾಂಗಣವನ್ನು ನಿರ್ಮಾಣ ಮಾಡಲು ಆಸಕ್ತಿ ಹೊಂದಿದ್ದು ಮಾನ್ಯ ಕುಲಪತಿಗಳೊಂದಿಗೆ ಇದರ ಬಗ್ಗೆ ಚರ್ಚಿಸಲಾಗಿದ್ದು ಅದಕ್ಕಾಗಿ ಅವಶ್ಯಕತೆ ಇರುವ 25 ಎಕರೆ ಜಾಗವನ್ನು ಲೀಜ ಆಧಾರಿತ ಒಡಂಬಡಿಕೆ ಮಾಡಿಕೊಳ್ಳಬಹುದಾಗಿದೆ ಎಂದು ಸಭೆಗೆ ಕುಲಸಚಿವರು ತಿಳಿಸಿದರು. ಈ ವಿಚಾರವನ್ನು ಚರ್ಚಿಸಿ ಸಭೆಯು ಈ ಪ್ರಸ್ತಾವನೆಯನ್ನು ಒಪ್ಪಿ KSCA ಯ ಜೊತೆ MOU ಮಾಡಿಕೊಂಡು ಕ್ರೀಡಾಂಗಣಕ್ಕೆ ಅವಶ್ಯಕತೆ ಇರುವ 25 ಎಕರೆ ಜಮೀನನ್ನು ನೀಡಬಹುದು ಎಂದು ನಿರ್ಣಯಿಸಿತು. ಈ ನಿರ್ಣಯವನ್ನು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಕಳುಹಿಸಿಕೊಡಲು ಸಭೆಯಲ್ಲಿ ಸೂಚಿಸಲಾಯಿತು. |

| | | |
|---|---|---|
| 8. | ಸ್ನಾತಕ ಪದವಿ (UG Course) ಕೋರ್ಸುಗಳನ್ನು ಹೊಂದಿಲ್ಲದ ಕಾಲೇಜುಗಳು ಸ್ನಾತಕೋತ್ತರ ಪದವಿ ಕೋರ್ಸಗಳಿಗೆ (PG College without UG Courses) . ಸರ್ಕಾರದ ಆದೇಶದ ಪ್ರಕಾರ 2023-24 ನೇ ಸಾಲಿನಲ್ಲಿ ಕಲು ಕೋರ್ಸಗೆ ಸಂಬಂಧಿಸಿದ UG Courses ಗೆ ಸಂಯೋಜನೆ ಪಡೆಯಲು ನಿರ್ದೇಶನ ನೀಡಿತ್ತು. ರಾಯಚೂರು ವಿಶ್ವವಿದ್ಯಾಲಯದ 17 PG ಕಾಲೇಜುಗಳಿಗೆ 2023-24 ನೇ ಸಾಲಿನ ಕಲು ಕೋರ್ಸನ ಪ್ರಥಮ ವರ್ಷಕ್ಕೆ ಸಂಯೋಜನೆ ಮುಂದುವರಿಕೆ ಮತ್ತು ಪ್ರವೇಶ ನೀಡುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ ಸಂಯೋಜನೆ ಪಡೆದ ಸ್ನಾತಕ ಕೋರ್ಸುಗಳಿರದ 18 ಪಿ.ಜಿ. ಕಾಲೇಜುಗಳಿಗೆ ( PG Colleges without UG Programmes) ಸಂಬಂಧಿಸಿದಂತೆ, ಸಭೆಯು ವಿಸ್ತ್ರತವಾಗಿ ಚರ್ಚಿಸಿ, ಒಂದೇ ಸ್ಥಳದಲ್ಲಿ, ಒಂದೇ ಆಡಳಿತ ಮಂಡಳಿಯ ಅಡಿಯಲ್ಲಿ ನಡೆಸಲಾಗುತ್ತಿರುವ ಸ್ನಾತಕ ಕಾಲೇಜು ಮತ್ತು ಸ್ನಾತಕೋತ್ತರ ಕಾಲೇಜುಗಳನ್ನು ನಡೆಸಲಾಗುತ್ತಿದ್ದ 15 ಸ್ನಾತಕೋತ್ತರ ಕಾಲೇಜುಗಳಿಗೆ ಮಾತ್ರ ವಿಶ್ವವಿದ್ಯಾಲಯದಿಂದ ಸಂಯೋಜನೆ ಪಡೆದ ಪಿಜಿ ಕೋರ್ಸುಗಳಿಗೆ ಕರ್ನಾಟಕ ಸರ್ಕಾರದ ಮುಂದಿನ ಆದೇಶ/ಮಾರ್ಗಸೂಚಿಗಳ ನಿಬಂಧನೆಗೆ ಒಳಪಟ್ಟು 2023-24ನೇ ಸಾಲಿಗೆ ಮಾತ್ರ ಅನ್ವಯವಾಗುವಂತೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿಯನ್ನು ನೀಡುವುದು ಎಂದು ಸಭೆಯು ಸರ್ವಾನುಮತದಿಂದ ನಿರ್ಣಯ ತೆಗೆದುಕೊಂಡಿತು. |
| 9. | ರಾಯಚೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹ ಪ್ರಾಧ್ಯಾಪಕರುಗಳಿಗೆ Phd ಗೈಡ್‌ಶಿಪ್ ಗುರುತಿಸುವಿಕೆಗೆ ಸಮಿತಿಯನ್ನು ರಚಿಸುವ ಕುರಿತು. | ಈ ವಿಚಾರವಾಗಿ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ ಮಾನ್ಯ ಕುಲಪತಿಗಳು ಪಿಎಚ್‌ಡಿ ಮಾರ್ಗದರ್ಶನ/Reserch center ಗಳಿಗೆ ಮಾನ್ಯತೆ ನೀಡಲು ನುರಿತ ತಜ್ಞರ ಸಮಿತಿಯನ್ನು ರಚಿಸಿ UGC ನಿಯಮನುಸಾರ ಗೈಡಶಿಫ್ ನೀಡಬಹುದಾಗಿ ನಿರ್ಣಯಿಸಲಾಯಿತು, ಮುಂದುವರೆದು UGC ಪ್ರಕಾರ Phd ನಿಯಮವಳಿಗಳನ್ನು ರಚಿಸಿ, ಸರ್ಕಾರಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲು ಸೂಚಿಸಲಾಯಿತು. |
| 10. | ರಾಯಚೂರು ವಿಶ್ವವಿದ್ಯಾಲಯ ಹಾಗೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು (UASR) ಮತ್ತು ಇತರ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ನಡುವೆ ಶೈಕ್ಷಣಿಕ ಸಹಕಾರ ಹಾಗೂ ಸಂಶೋಧನಾ ವಿಷಯಗಳ ಕುರಿತು ಒಪ್ಪಂದ.<br><br>(Memorandum of Understanding Academic Cooperation between Raichur University,Raichur and University of Agricultural Sciences, Raichur and Other Government First Grade Colleges) ಮಾಡಿಕೊಳ್ಳುವ ಕುರಿತು. | ರಾಯಚೂರು ವಿಶ್ವವಿದ್ಯಾಲಯ ಶೈಕ್ಷಣಿಕ ಗುಣಮಟ್ಟವನ್ನು ಉನ್ನತೀಕರಿಸಲು, ವಿವಿಧ ವಿಶ್ವವಿದ್ಯಾಲಯಗಳು/ಸಂಸ್ಥೆಗಳು/ಖಾಸಗಿ ಸಂಸ್ಥೆಗಳ ಜೊತೆ ಸರ್ಕಾರದ ನಿರ್ದೇಶನದಂತೆ ಶೈಕ್ಷಣಿಕ ಒಪ್ಪಂದಗಳನ್ನು ಮಾಡಿಕೊಂಡು ಬಂದಿರುತ್ತದೆ. ಮುಂದುವರೆದು, ರಾಯಚೂರು ವಿಶ್ವವಿದ್ಯಾಲಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳೊಂದಿಗೆ ಶೈಕ್ಷಣಿಕ ಹಾಗೂ ಸಂಶೋಧನೆ ವಿಷಯಗಳನ್ನು ಬಗ್ಗೆ ಒಡಂಬಡಿಕೆ ಮಾಡಿಕೊಂಡಿರುತ್ತಾರೆ ಎಂದು ಕುಲಪತಿಗಳು ಸಭೆಯಲ್ಲಿ ತಿಳಿಸಿದರು. ಮುಂದುವರೆದು ಉಪಕರಣತ್ಮಾಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥರಾದ ಪ್ರೊ. ಪಾರ್ವತಿ ಸಿ.ಎಸ್. ಇವರು ಕಂಪನಿ Elico limited Hydrabad ಇವರೊಂದಿಗೆ ಶೈಕ್ಷಣಿಕ ಮತ್ತು ಸಂಶೋಧನಾ ಒಡಬಂಡಿಕೆ ಮಾಡಿಕೊಳ್ಳಲು ಅನುಮತಿಸಬೇಕೆಂದು ಸಭೆಯಲ್ಲಿ ಮಂಡಿಸಿದರು, ಸಭೆಯು ಈ ಎಲ್ಲಾ ಒಡಬಂಡಿಕೆಯನ್ನು |

| | | |
|---|---|---|
| | | ಅನುಮೋದಿಸಿ, ಒಪ್ಪಿಗೆ ನೀಡಿತು. |
| 11. | ರಾಯಚೂರು ವಿಶ್ವವಿದ್ಯಾಲಯದ ಕುಲಪತಿಗಳಿಗೆ ಹಾಗೂ ಇತರ ಆಡಳಿತ ಅಧಿಕಾರಿಗಳಿಗೆ ಹಣಕಾಸಿನಪ್ರತ್ಯಾಯೋಜನೆಯ (Delegation of Financial Powers to Vice-Chancellor and Other Officers of Raichur University ) ಕುರಿತು. | ರಾಯಚೂರು ವಿಶ್ವವಿದ್ಯಾಲಯದ ದೈನಂದಿನ ಕಾರ್ಯಚಟುವಟಿಕೆಗಳು ಬೆಳೆಯುತ್ತಿದ್ದು, ಸೂಕ್ತ ಆಡಳಿತ ನಡೆಸಲು ವಿಶ್ವವಿದ್ಯಾಲಯ ಆಡಳಿತ ಅಧಿಕಾರಿಗಳಿಗೆ ಹಣಕಾಸಿನ ಪ್ರತ್ಯಾಯೋಜನೆಯನ್ನು ಒದಗಿಸಲು ಪರಿನಿಯಮಾವಳಿಗಳನ್ನು ರಚಿಸಿ, ಅದನ್ನು ಕಾರ್ಯ ರೂಪಕ್ಕೆ ತರಲು ಸಭೆಯಲ್ಲಿ ಚರ್ಚೆಗೆ ಮಂಡಿಸಿದರು. ಈ ವಿಚಾರವನ್ನು ಕೂಲಂಕೂಷವಾಗಿ ಪರಿಶೀಲಿಸಿ ಸಭೆಯು, ಪರಿನಿಯಮಾವಳಿಗಳನ್ನು ವಿಶ್ವವಿದ್ಯಾಲಯದ ಹಣಕಾಸು ಸಮಿತಿ, ವಿದ್ಯಾ ವಿಷಯಕ ಪರಿಷತ್ತು ಸಭೆಯಲ್ಲಿ ಮಂಡಿಸಿ ನಂತರ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು. |
| 12. | ಮಾನ್ಯ ಕುಲಪತಿಗಳ ವೈದ್ಯಕೀಯ ವೆಚ್ಚಗಳ ಬಿಲ್ಲುಗಳ ಮರು ಪಾವತಿ ಕುರಿತು. | ಮಾನ್ಯ ಕುಲಪತಿಗಳ ವೈದ್ಯಕೀಯ ವೆಚ್ಚವನ್ನು ವಿಶ್ವವಿದ್ಯಾಲಯದ ನಿಯಮನುಸಾರ ನೀಡಬಹುದಾಗಿರುತ್ತದೆ ಎಂದು ಸಿಂಡಿಕೇಟ್ ಸಭೆಯು ನಿರ್ಣಹಿಸಿ ಒಪ್ಪಿಗೆ ನೀಡಲಾಯಿತು. |
| 13. | ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳ ಚರ್ಚೆ.<br><br>1.Adjunct Professor ಪ್ರಭಂಜನ್ ಗಾಯಿಯವರ ನೇಮಕವನ್ನು ಸಿಂಡಿಕೇಟ್ ಅನುಸಮರ್ಥಿಸುವ ಕುರಿತು. | ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ UGC ನಿಯಮನುಸಾರ ಪ್ರೊ.ಪ್ರಭಂಜನ್ ಗಾಯಿಯವರ ಅರ್ಜಿಯನ್ನು ಕುಲಂಕೂಷವಾಗಿ ಪರಿಶೀಲಿಸಿ ಅವರು ನಡೆಸಿರುವಂತಹ ಸಂಶೋಧನಾ ಚಟುವಟಿಕೆಗಳು ಹಾಗೂ ವಿಷಯ ಪರಿಣಿತಿಯ ಬಗ್ಗೆ ಸಭೆಯಲ್ಲಿ ಕುಲಂಕೂಷವಾಗಿ ಪರಿಶೀಲಿಸಿ ಸರ್ವಾನುಮತದಿಂದ ಅವರನ್ನು Adjunct Professor ಆಗಿ ನೇಮಿಸಲು ಒಪ್ಪಿಗೆ ನೀಡಿ, ಯುಜಿಸಿ ಮಾರ್ಗಸೂಚಿಗಳನ್ನು ಆಧರಿಸಿ, Adjunct Professor ನ್ನು ನೇಮಿಸಿಕೊಳ್ಳಲು ಪರಿನಿಯಮಾವಳಿಗಳನ್ನು ರಚಿಸಿ ಸರ್ಕಾರಕ್ಕೆ ಕಳುಹಿಸಿ ಕೊಡಬೇಕೆಂದು ತೀರ್ಮಾನಿಸಲಾಯಿತು. |
| 2 | ರಾಯಚೂರು ವಿಶ್ವವಿದ್ಯಾಲಯದ ವತಿಯಿಂದ 2023-24 ನೇ ಸಾಲಿನಲ್ಲಿ ಏಕವಲಯ ಮತ್ತು ವಿಶ್ವವಿದ್ಯಾಲಯದ ತಂಡದ ಆಯ್ಕೆಯನ್ನು ಆಯೋಜಿಸಲು ವಂತಿಗೆ ಹಣ ನಿಗದಿ ಪಡಿಸುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ 2023-24 ನೇ ಸಾಲಿನ ಏಕವಲಯ ಪಂದ್ಯಾವಳಿಗಳಿಗೆ ವಿಶ್ವವಿದ್ಯಾಲಯದಿಂದ ಧನ ಸಹಾಯ ಹಾಗೂ ಪ್ರತಿ ಪಂದ್ಯಕ್ಕೆ 20,000 ರೂ, ವಂತಿಗೆ ಹಣ ನಿಗದಿಪಡಿಸಿ, ಅನುಮೋದಿಸಲಾಯಿತು. |

| | | |
|---|---|---|
| 3 | ವಿಶ್ವವಿದ್ಯಾಲಯ ಮಟ್ಟದಲ್ಲಿ ಭಾಗವಹಿಸುವ ತರಬೇತುದಾರರಿಗೆ ಕ್ರೀಡಾಪಟುಗಳಿಗೆ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಯನ್ನು ನಿಗದಿ ಪಡಿಸುವ ಕುರಿತು. | ವಿಶ್ವವಿದ್ಯಾಲಯ ಮಟ್ಟದಲ್ಲಿ ಭಾಗವಹಿಸುವ ತರಬೇತುದಾರರಿಗೆ ಹಾಗೂ ಕ್ರೀಡಾಪಟುಗಳಿಗೆ ಒಂದು ದಿನಕ್ಕೆ 500 ರೂ, ತಂಡದ ತರಬೇತಿದಾರರಿಗೆ ಒಂದು ದಿನಕ್ಕೆ 1000 ರೂ. ಹಾಗೂ ವಿಶ್ವವಿದ್ಯಾಲಯ ತಂಡದ ಸ್ಪರ್ಧೆ ಸಂದರ್ಭದಲ್ಲಿ ತರಬೇತಿದಾರರಿಗೆ ಒಂದು ದಿನಕ್ಕೆ 1000 ರೂಗಳನ್ನು ದಿನಭತ್ಯೆ ನೀಡಬೇಕೆಂದು ನಿರ್ಣಯಿಸಿ ಅನುಮೋದಿಸಲಾಯಿತು. |
| 4 | ದಿನಾಂಕ 03.10.2023 ರಿಂದ 07.10.2023 ರ ವರಗೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರೇಕ್ಷಾಗೃಹದಲ್ಲಿ ರಾಯಚೂರು ವಿಶ್ವವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನೆಯಿಂದ ಆಯೋಜಿಸಿದ ರಾಜ್ಯ ಮಟ್ಟದ ಎನ್.ಎಸ್.ಎಸ್. ಯುವ ಜನೋತ್ಸವದಲ್ಲಿ ಮಾಡಿದ ಖರ್ಚು ವೆಚ್ಚಗಳನ್ನು ಸಿಂಡಿಕೇಟ್ ಅನುಮೋದಿಸುವ ಕುರಿತು. | ದಿನಾಂಕ 03.10.2023 ರಿಂದ 07.10.2023 ರವರೆಗೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರೇಕ್ಷಾಗೃಹದಲ್ಲಿ ರಾಯಚೂರು ವಿಶ್ವವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನೆಯಿಂದ ಆಯೋಜಿಸಿದ ರಾಜ್ಯ ಮಟ್ಟದ ಎನ್.ಎಸ್.ಎಸ್. ಕಾರ್ಯಕ್ರಮ ಅಧಿಕಾರಿ ನೀಡಿದಂತಹ ಖರ್ಚು ವೆಚ್ಚಗಳ ವಿವರವನ್ನು ಸಭೆಗೆ ಮಂಡಿಸುತ್ತಾ, ಕಾರ್ಯಕ್ರಮ ಅಧಿಕಾರಿಗಳಾದ ಡಾ.ಜಿ.ಎಸ್.ಬಿರಾದಾರ ಅವರನ್ನು ಸಿಂಡಿಕೇಟ್ ಸಭೆಯಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ಆಯೋಜಿಸಿರುವುದಕ್ಕೆ ಸಭೆಯಲ್ಲಿ ಅಭಿನಂಧನೆ ಸಲ್ಲಿಸುತ್ತಾ, ಖರ್ಚು ವೆಚ್ಚ ಪಟ್ಟಿಯನ್ನು ಪರಿಶೀಲಿಸಿ, ಒಟ್ಟು ಖರ್ಚಾದ 7.97,416 ರೂ.ಗಳಲ್ಲಿ ಸರ್ಕಾರದಿಂದ ಈ ಕಾರ್ಯಕ್ರಮಕ್ಕೆ ಬಂದಂತಹ ಮೊತ್ತ 4 ಲಕ್ಷ ರೂ. ಹಾಗೂ ವಿಶ್ವವಿದ್ಯಾಲಯದ ಮ್ಯಾಚಿಂಗ್ ಗ್ರ್ಯಾಂಟ್ಸ್‌ನಿಂದ (ಇಂದಿನ ಸಿಂಡಿಕೇಟ್ ಸಭೆಯ ದಿನಾಂಕ 18.08.2023 ರಲ್ಲಿ ಅನುಮೋದನೆಗೊಂಡಿದೆ) 4 ಲಕ್ಷ ರೂ.ಗಳಲ್ಲಿ ಒಟ್ಟು ಖರ್ಚಾದ 7.97,416 ರೂಗೆ ಸಮರ್ಥಿಸಿ, ಅನುಮೋದಿಸಲಾಯಿತು. |

9/11/23
(ಪ್ರೊ. ವಿಶ್ವನಾಥ ಎಂ)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.

(ಪ್ರೊ. ಹರೀಶ್ ರಾಮಸ್ವಾಮಿ)
ಕುಲಪತಿಗಳು ಹಾಗೂ ಸಭೆಯ ಅಧ್ಯಕ್ಷರು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.